ಹೊರಡೋವಾಗ ತನ್ನ ಜೊತೆ ತನ್ನವಳು ಗಿಲಿಗಿಲಿ ನಗುತ್ತ ಬರ್ಬೇಕೂಂತಾ ಆಸೆ ಪಟ್ಕೊಂಡವ್ನು. ಬಾಬುರಾಯರು ಎಂದರೆ 'ಮಾವ' ಆ ಕ್ಷಣದಲ್ಲಿ ಏನಾದರೊಂದು ರೋಗದ ಹೆಸರೆತ್ತಿ ನರಳುತ್ತ ಧ್ವನಿ ತಾರಕಕ್ಕೇರಿಸುತ್ತ–

'ನೀ ಹೆಂಡ್ತಿ ಜತೆ ಹಾಂಗೆ ಕುಮ್ಟೆ ಊರು ಸುತ್ತಾಡ್ತಾ ಕೂರ್ತೀನಿ ಅಂದ್ರೆ... ಮೊನ್ನೇಂದ ಭವಾನಿಗೆ... ನಿನ್ತಾಯಿಗೆ... ದಮ್ಮು ಹೆಚ್ಚಾಗಿ ಎಷ್ಟ್ ತ್ರಾಸು ಪಡ್ತಿದಾಳೇಂತಾ ನಿಂಗೇನೋ ಗೊತ್ತು!? ಮದ್ವೆ ಆಗಿ ಆರ್ ತಿಂಗ್ಳಾಗಿಲ್ಲ... ಈಗ್ಲೇ ಹೀಂಗೆ ಸುಧಾಕರ ಸುಮ್ನೆ ಪ್ರೋಗ್ರಾಂ ಪೋಸ್ಟ್ ಪೋನ್ ಮಾಡ್ಬಾಕು... ಅವ್ಳಿಗೆ ಅಡಿಗೆ ಕೆಲ್ಸ ಆಗಲ್ಲಾ... ಸುಸ್ತಾಗ್ತಾಳೆ... ಹೆಜ್ಜೆ ಹಾಕಿದ್ರೆ... ಉಸಿರು...' ತಾವೇ ಎದೆಯುಬ್ಬಿಸಿ ಸಪೂರ–ತೋರ ಮಾಡಿ ಪ್ರದರ್ಶಿಸಿ ನರಳಾಟದ ಧ್ವನಿ ಚಿಮ್ಮಿಸಿದಾಗ ಮಾಲತಿ ಕಣ್ಸನ್ನೆ ಮಾಡಿ ತಿರುಗಾಟ ರದ್ದುಮಾಡೋ ಮಂದಹಾಸ ಬೀರಿ ನಾಟ್ಕ ಮುಕ್ತಾಯ ಮಾಡ್ತಾಳೆ. ನವರಾತ್ರಿ ಹೊತ್ತಲ್ಲಿ ಕುಮ್ಟೆ ಊರಿನ ಏಳು ದೇವಾಲಯಗಳಲ್ಲಿ ಒಂಬತ್ತು ದಿನ ಹೂವಿನ ಮಂಟಪ, ಪಲ್ಲಕ್ಕಿ, ದೀಪಾಲಂಕಾರ ಅಂತಾ ಭಕ್ತೀಲಿ ಮಿಂದು ಕೃತಾರ್ಥರಾಗೋದುಂಟಲ್ಲ, ಬಾಬುರಾಯರಿಗೆ ಸೊಸೆ ಎದುರುತ್ತರ ಕೊಡುವಷ್ಟು ಮನಸ್ಸು ಗಟ್ಟಿ ಮಾಡಿಕೊಂಡಿಲ್ಲಾ ಅನ್ನೋ ಖೂಬಿ ಪಕ್ಕಾ ಗೊತ್ತು. ಸುಧಾಕರ ಮಾತ್ರ ಕಣ್ಣ–ಕೆನ್ನೆ ಕೆಂಬಣ್ಣಕ್ಕೇರಿಸಿಕೊಂಡು ದುರುದುರು ನೋಡುತ್ತ ಮಾಯವಾಗುತ್ತಾನೆ. ಈ ದೃಶ್ಯ ಭವಾನಿ ನೋಡುತ್ತಾಳೆ. 'ನೀನ್ಬೇಕಾರೆ ಅವ್ನ ಜೊತೆ...' ಅನ್ನುವಷ್ಟರಲ್ಲಿ ಮಾಲತಿನೇ 'ಇರ್ಲಿ ಬಿಡೀಮ್ಮಾ... ಇನ್ನೊಂದ್ಸಲ ನೋಡಿದ್ರಾತು' – ಎಂತ ನಯ ಧ್ವನೀಲಿ ಮಾತನ್ನ ತೇಲಿಸಿದಾಗ ಭವಾನಿಗೆ ಖುಷಿ ಆಗದಿರುತ್ತದೆಯೆ? ಹಿಗ್ಗೋ ಹಿಗ್ಗು. ಮೌನದಲ್ಲಿ ಮಂದಹಾಸ ದೃಷ್ಟಿ ಹರಿಸಿ 'ಮುತ್ತಿನಂಥಾ ಸೊಸೆಗೆ... ಆ ಗೋವಾದ ಮಂಗೇಶ ಮಹಾಲಕ್ಷ್ಮಿ ದೇವ್ರೇ ನಮ್ ಸುಧಾಕರಂಗೆ ಅಂತ್ಹೇಳಿ ಹುಟ್ಟಿಸಿ ತಂದು ಗಂಟು ಹಾಕಿ ಕರುಣಿಸಿರ್ಬೇಕು'– ಅಂದುಕೊಳ್ಳೋದಿದೆ. ಮಾಲತಿಗೆ ಅಹಂಕಾರವೇ ಇರಲಿಲ್ಲ ಎಂತಲ್ಲ. ಅವಳ ತಂದೆ ಶ್ರೀಪಾದರಾಯರು ಉಡುಪಿಯಲ್ಲಿ ಲಾಯರ್ರಾಗಿದ್ದವರು ಲಗ್ನ ಮುಗಿದ ತಿಂಗಳೊಳಗೇ ಹೃದಯಾಘಾತದಿಂದ ಮಣಿಪಾಲ್ ಆಸ್ಪತ್ರೆಯಲ್ಲಿ ತೀರಿಕೊಂಡಿರಲ್ಲ. ಅಣ್ಣ ಪರಮಾನಂದ ಹಳೆಮನೆ ಮಾರ್‍ಬಾಕಿ ಹೆಂಡ್ತಿ ಜತೆ ಮುಂಬೈ ಸೇರಿಕೊಂಡಾಗ ಮಾಲತಿಗೆ ತಾನು ಇನ್ನಂತೂ ಖರೇಗ್ಲೂ 'ಅನಾಥ'ನೇ ಅನ್ನಿಸಿ ಬಿಟ್ಟಿತು. ಕಾರಣ ಅಣ್ಣ ತಾಯಿಗೂ ಕರೆದೊಯ್ದಿದ್ದು. ಇದೆಲ್ಲ ಹಕೀಕತ್ತು ಸುಧಾಕರನ ಚಿತ್ತಲೋಕ ರಾಡಿ ಮಾಡಿ ಹಾಕ್ತು.

ಲಗ್ನದ ಹೊಸತರಲ್ಲಿ ದಂಪತಿಗಳಿಗೆ ಇಳೆಯೇ ಮುಗಿಲಿನಿಂದಿಳಿದ 'ಸ್ವರ್ಗ'ದಂತೆ ಕಾಣಿಸುವುದು ಅಷ್ಟು ದಿನ ಸಹಜಾನೇ. ಅತ್ತೆ ಭವಾನಿಯ ಕೆಂಬಣ್ಣದ ಮೊಗ ಸಿಟ್ಟನ್ನೇ ಪ್ರದರ್ಶಿಸುತ್ತಿದ್ದರೂ; ಆಕೆ ಹಾಗಲ್ಲಾಂತ ಮಾಲತಿಗೆ ತನ್ ತಾನೇ ಅನುಭವ ಆಯ್ತು. ಅತ್ತೆ ಹೇಗೂ ನಿಭಾಯಿಸಿಯಾಳೂಂತಾ ಮಾವ ಈಗ ಸೊಸೆಯ ಕುರಿತಾಗಿ ಕೆಂಡ ಕೆಂಡ ಆಗುತ್ತಾನೆ. ಅಡಿಗೆ ಕೆಲಸದಲ್ಲಿ ಅತ್ತೆಗೆ ಸಹಾಯ, ಮನೆ ದೇಖರಿಕೆ, ಗಂಡನ ಬ್ಯಾಂಕ್–ಅಲ್ಲಿ ಇಲ್ಲಿ ವ್ಯವಹಾರದ ಜವಾಬ್ದಾರಿ ಬಂಧು–ಮಿತ್ರರ ಆಗಮನ, ಅವರಿಗೆ ರಾಜೋಪಚಾರ, ಪಕ್ಕದ್ಮನೆ ವಿಶಾಲಮ್ಮಗೆ ಡಾಕ್ಟ್ರು ಹುಬ್ಬಳ್ಳೀಲಿ 'ಕ್ಯಾನ್ಸರ್'– ಅಂದ ಲಾಗಾಯ್ತು ಮಾಲತಿ ದಿಕ್ಕು ತಪ್ಪಿದ ಹರಿಣಿಯಾದಳಲ್ಲ. ಇವೆಲ್ಲದರ ಮಧ್ಯೆ ಒಮ್ಮೆ ಬಾಬುರಾಯರು ತಾವೇ ಸ್ವತಃ ಥಂಡಿ, ಕಫ, ಕೆಮ್ಮು, ಜ್ವರಾಂತ ಹಾಸಿಗೆ ಹಿಡಿದಾಗ, ಮಾಲತಿಯೇ, 'ನೀವ್ ರೆಸ್ಟ್ ತಗೊಳ್ಳಿ ಅಪ್ಪಾಜಿ... ನಾನ್ ಮದ್ದು ಗುಳಿಗೆ ತಂದ್ಕೊಡ್ತೀನಿ... ಮೋಹನ್ ಡಾಕ್ಟ್ರ ಷಾಪಿಂದ...' ಅಂತಂದು ಗಂಭೀರ ಕಂಠದಲ್ಲಿ ರಾಗ ಎಳೆದಾಗ ಬಾಬುರಾಯರು ನಿರ್ವಾಹವಿಲ್ಲದೆ ಪರ್ಸ್ ಬಿಚ್ಚಿ ನೂರರದ್ದೆರಡು ನೋಟು ಸೊಸೆಯ ಕೈಗಿತ್ತಾಗ,

'ಏನ್ಬೇಡಿ ಅಪ್ಪಾಜಿ... ದುಡ್ಡು... ಆಮೇಲೆ ಹೇಳ್ತೀನಿ...' ಆ ಸ್ವರದಲ್ಲಿ ಸಹಜತೆ ಪ್ರೀತಿ ಭಕ್ತಿ ಗೌರವ ಒಟ್ಟಿಗೇ ಸೇರಿತ್ತಲ್ಲ; ಬಾಬು ರಾಯರು ನೋಟೆತ್ತಿಕೊಂಡು ನಸುನಕ್ಕು ಮಂಚದತ್ತ ನಡೆದರು. ಫಕ್ಕನೆ ರಾತ್ರಿ ಅವತ್ತೇ, 'ನೀನ್ ಅವ್ನು ಕೊಟ್ಟ ದುಡ್ಡು ತಕ್ಕೋಬೇಕಾಗಿತ್ತು!' –ಸುಧಾಕರ ಗೊಣಗಾಡಿದ್ದ ವಾಕ್ಯ ಅದು ಮಾಲತಿಗಿರಬೇಕು, ಬಾಬುರಾಯರು ಕಿಟಕಿ ಬಳಿ ಗುಂಗೆ ಹುಳ ಓಡಿಸೋ ತವಕದಲ್ಲಿದ್ದಾಗಲೇ ಕೇಳಿಸಿಕೊಂಡಿದ್ದು 'ಇದು ಬೆಳಿಗ್ಗೆಯ ನನ್ ದುಡ್ಡಿನ್ಕಥೆ'– ಖಾತ್ರಿಯಾಗ್ಹೋಯ್ತು. 'ಥುತ್' ಅನ್ನಿಸಿಬಿಟ್ಟಿತು.

ಅದೇನ್ ಯಾರೇನ್ ಮೋಡಿ ಮಾಡಿದ್ದರೋ; ಅಂದಿನಿಂದ ಬಾಬುರಾಯರು ಕೊಡೋ ಒಂದು ರೂಪಾಯಿ ನಾಣ್ಯವನ್ನೂ ಲೆಕ್ಕದ್ದಾಗಿದ್ದಾಗ ಮಾಲತಿ ಕೈಯ್ಯೊಡ್ಡುತ್ತಾಳೆ. ಒಂದು, ಎರ್ಡು, ಐದು, ಹತ್ತಕ್ಕೂ ಕೈ ಹಿಂದೆಳೆದಿಲ್ಲಾಂತ ಸೊಸೆಯ ವರ್ತನೆ ಅದು ಸುಧಾಕರನ ದುಷ್ಪ್ರೇರಣೆಯದೇ ಪ್ರತಿಫಲಾನೇ ಖರೆ ಅನ್ನಿಸ್ತು ಭವಾನಿಗೆ, ಈಗಂತೂ ಮಾಲತಿಯ ಸ್ವರೋಚ್ಚಾರ ಏರುತ್ತದೆ.

'ನಿಮ್ ಮಗಂಗೆ ಯಾರೂ ಗಿಫ್ಟ್ಂತಾ ರಾಶಿ ರಾಶಿ ದುಡ್ಡು ಬಂದು ಸುರೀತಾರೆ ಅನ್ಕೊಂಡಿದೀರಾ? ನಂಗೂ ಖರ್ಚಿದೆ' ಅಂದಾಕ್ಷಣ ಸೊಸೆ ಬಸಿರಿ ಇರ್ಬೇಕೂಂತಾ ಭವಾನೀದು ಗ್ರಹಿಕೆ. ಹಿಂದೆಲ್ಲ ಉಮೇದಲ್ಲಿ ತಾನಾಗಿ ವಿಶ್ಲೇಷಿಸುತ್ತಿದ್ದ ರಂಗುರಂಗಿನ ಮಾತಿನ ಪ್ರಸ್ತಾಪ ಈಗ ಮಾಲತಿಗೆ 'ಅಲರ್ಜಿ' ಆಗಿದೆ ಅನ್ನೋ ಸತ್ಯಾಂಶ ಭವಾನಿಗೆ ಪಕ್ಕಾ ಏಕೆಂತಾ ಗೊತ್ತು. ಆದರೆ ಈಕೆ ಮೌನ ಮೂರ್ತಿ! ಜಮಾನಾದಲ್ಲಿ ಅತ್ತೆ–ಸೊಸೆಯರ ಮಧುರ ಸಂಬಂಧವೆಂದರೆ ಥೇಟ್ ಹಾವು–ಮುಂಗಸಿ ಥರದ್ದೇಂತಾ ಅಲ್ಲಿ ಇಲ್ಲಿ ಕಂಡು ಕೇಳಿದ್ದ ದೃಶ್ಯಾವಳಿ ವಾಕ್ಸಮರವೆಲ್ಲ ತನ್ನ ಪಾಲಿಗೆ ಬರಲಿಕ್ಕಿಲ್ಲ. ಆ ಶಾಂತೇರಿ ಕಾಮಾಕ್ಷಿ ದೇವಿ ಕೃಪೇಂದ ಅಂತಾ ಯಾಣದ ಬೆಟ್ಟದೆತ್ತರದಷ್ಟು ನಂಬಿಕೇಲಿ ನೆಚ್ಚಿಕೊಂಡಿದ್ದ ಭವಾನಿಗೆ ತನಗೂ ಅದೇ ದೇವಿ ಅದೇ ಶಿಕ್ಷೆ ಕೊಟ್ಟಾಗ ಮಾತ್ರ ದಂಗಾಗಿ ಹೋದಳು!

'ಅತ್ತೇವ್ರೇ...?' ಹಿಂದೆ ಮದ್ವೆಯ ಹೊಸತರಲ್ಲಿ ಅಮ್ಮಾಂತ ಪ್ರೀತೀಲ್ಲಿ ತನ್ನನ್ನು ಈಕೆ ಅದೇನ್ ಉಕ್ಕಿ ಬರುತ್ತಿತ್ತೋ ಅಕ್ಕರೆಯ ಸಕ್ಕರೆಲೀ ಕರೆಯುತ್ತಿದ್ದ ಇದೇ ಸೊಸೆ ಮಾಲತಿ ದರ್ಪದ ಸ್ವರದಲ್ಲೀಗ ಬರೀ 'ಅತ್ತೆ' ಅಂತಾನೇ ವಿರಸಭಾವಕ್ಕೆ ಸಾಕ್ಷಿಯಾಗಿದೆ. ಆಕೆನೇ 'ನಿಮ್ಗೆ ಪಾತ್ರೆ ಒರೆಸಿಡ್ಲಿಕ್ಕಾಗಲ್ಲಾ... ಕಿಚನ್‌ನಲ್ಲಿ ಯಾವಾಗ ನೋಡಿದ್ರೂ ಗಲೀಜು... ಗಲೀಜು... ಎಷ್ಟು ಬಡ್ಕೊಂಡೆ... ಉಟ್ಕೊಂಡ ಸೀರೇಂದ್ಲೆ ಮೂಗು ಒರೆಸ್ಕೊಳ್ಬೇಡೀಂತಾ... ಕೇಳ್ತೀರಾ... ಈಗ ನನ್ಮಗ್ಳು ಜ್ಯೋತಿನೂ...'

ಅರ್ಥವಾಗ್ಹೋಯ್ತು ಭವಾನಿಗೆ. ಮತ್ತೆ ಮಾಲತಿನೇ ಏರುದನೀಲ್ಲಿ, 'ನಿಮ್ಮಿಚ್ಛೆ ಬಂದ್ಹಂಗೆ ಅಡಿಗೆ ಬೇಯ್ಸಿ ಹಾಕ್ತೀರಿ. ನಾನ್ಹೇಳೋದೊಂದು... ನೀವ್ಮಾಡೋದು ಬೇರೊಂದು... ಒಂದ್ ರುಚಿ ಇಲ್ಲ... ಸುಡ್ಗಾಡಿಲ್ಲ... ಜಾನುವಾರು ಸಹ ಮೂಸಿ ನೋಡ್ಬಾರ್ದು ಆ ಥರದ್ದು... ಛೀ! ಛೀ! ಮಾವ ನೀವ್ಹೇಳ್ದಂಗೆ ಸಾಮಾನು ತಂದ್ಹಾಕ್ತಾರೆ... ನಿಮ್ದೇ ಡೈರೆಕ್ಷನ್... ನಂಗೊತ್ತಿಲ್ವ...' ಅನ್ನುತ್ತ ಕೈಯ್ಯಲ್ಲಿದ್ದ ಪಾತ್ರೆ ಮೋರಿಯತ್ತ ಧಡ್ಡನೆ ಬಿಸಾಕಿದ್ದೇ ಭವಾನಿಯ ಮುಖ ನೋಡಿದ್ದು! 'ಸಾಕು ನಿಮ್ಮ ಅಮೃತ ಹಸ್ತದ ಅಡಿಗೆ ತಿಂದು' ಎಂಬರ್ಥದ್ದೇ ಆಗಿತ್ತು. ಉರೂಟು ಮುಖದ ಮುದ್ದಿನ ಒಬ್ಬಳೇ ಮೊಮ್ಮಗಳು ಜ್ಯೋತಿಗೆ ಒಂದರೆಕ್ಷಣ ಅಜ್ಜಿಯ ಜೊತೆ ಪ್ರೀತಿಲ್ಲಿ ಮಾತುಕತೆ ಆಡಲಿಕ್ಕೂ ಆಸ್ಪದ ನೀಡದಂತೆ ಅಪ್ಪಿ ಹಿಡಿದಂತೆ ಮಾಲತಿ ಮಗಳ ಬೆನ್ನ ಹಿಂದೆಯೇ ಪ್ರತಿಯೊಂದನ್ನೂ ನಿರ್ದೇಶಿಸುತ್ತಿದ್ದ ಅವಳ ಠೀವಿ–ಅಂತರಾರ್ಥ ಭವಾನಿಗೆ ಅರ್ಥವಾಗಿದೆ.

'ಇವ್ಳ ಜೊತೆ ದಿನಾ ಬೆಳಗಾದ್ರೆ... ನಿಭಾಯಿಸ್ಕೊಳ್ತ ಕಾಲ ಕಳೆಯೋದು ಸಾಕಾಗ್ಹೋಗಿದೆ ಕಣ್ರೇ... ನಂಗಂತೂ ಉಬ್ಬಸ, ಹಾರ್ಟ್ ಆಪ್ರೇಷನ್, ಬಿ.ಪಿ. ಮಂಡಿ ಆಪ್ರೇಷನ್, ಥಂಡಿ–ಕಫಾಂತ ತಲೆ ಗಿರ್ರ್ಕ್ ಆಗ್ತದೆ. ಯಾಕಾದ್ರೂ ಆ ಭಗ್ವಂತ' ಇನ್ನೂ ಬದುಕಿಸಿದ್ದಾನೆ ಅನ್ನೋದು ಭವಾನಿಯ ದುಃಖದ ಮೊರೆತಕ್ಕೆ ಕಣ್ಣೊರೆಸಿಕೊಳ್ಳುತ್ತಾಳೆ. ಕೆಲಸದವ್ಳು ಒಗೆದ ಬಟ್ಟೆಯಲ್ಲಿ ಜ್ಯೋತಿಯ ಬಟ್ಟೆ ಸೇರಿದ್ದರೆ ಮಾಲತಿ ದುಡುದುಡು ಬಂದು ಆ ಬಟ್ಟೆ ರಾಶಿ ಕೆದರಿ ಕೆದರಿ ಮಗಳ, ತನ್ನ, ಗಂಡನ ಬಟ್ಟೆ ಪ್ರತ್ಯೇಕಿಸಿ ನೀಟಾಗಿ ಸರ್ಕಿಂತಾ ಒಯ್ಯೋ ದೃಶ್ಯವೂ ಭವಾನಿ ಕಾಣುತ್ತಾಳೆ ನಿಟ್ಟಸಿರಿಟ್ಟು! ಕೆಲವು ಬಾರಿ ಮಾಲತಿ ತನ್ನ ಮೆಚ್ಚಿನ ಸಿಹಿತಿಂಡಿ ತಾನೇ ತಯಾರಿಸುತ್ತಾಳೆ. ಪ್ರತ್ಯೇಕ ತವರ್ಮನೇಂದ ತಂದ ಸ್ಟೀಲ್ ಡಬ್ಬಿಯಲ್ಲಿಟ್ಟುಕೊಂಡು ಮಹಡಿ ಏರಿ ಮಗಳ ಜೊತೆ ಕೂತು ಗಮ್ಮತ್ತಲ್ಲಿ ತಿನ್ನುವುದುಂಟು. 'ರುಚಿ ನೋಡ್ತೀರಾ ಅತ್ತೆ?' ಅಂತಾ ಕೇಳೊದಿಲ್ಲ. ಶುಭೋದಯದಲ್ಲಿ ಮಾಲತಿ 'ಯಜಮಾನಿ' ಅನ್ನೋದು ನೆಲ್ಲಕೇರಿಯಲ್ಲಿ ಜಗಜ್ಜಾಹೀರಾಗಿದೆ. ತನಗೆ ಮಗಳಿಗೆ ಬೆಲೆ ಬಾಳೋ ಚೆಂದ ಬಟ್ಟೆ ತಂದು ತರಿಸಿ ಉಡುತ್ತಿದ್ದ ಮಾಲತಿ ಅತ್ತೆಮ್ಮಗೆ ಸೀರೆ ಬಟ್ಟೆಯ ಬಗೆಗೆ ಪ್ರಶ್ನಿಸುವುದಿಲ್ಲ. ಮನೆಯಲ್ಲಿ ಅಲಂಕಾರ ಸಾಮಗ್ರಿ ಉಹುಂ, ಹಬ್ಬ, ಹುಣ್ಣಿಮೆ ಸರಳ!

'ಇಲ್ನೋಡಿ... ಈ ಮನೇಂತಾ ಕುತ್ತಿಗೆಗೆ ಗಂಟು ಹಾಕ್ಕೊಂಡಿದೀವಲ್ಲಾ... ಇಲ್ಲೇ ಬಿದ್ಕೊಂಡಿರ್ಬೇಕು... ಇಲ್ಲೇ ಸಾಯ್ಬೇಕು...!'

ಹತಾಶ ಭಾವದಲ್ಲಿ ಆರಂಭಿಸಿದ್ದ ಭವಾನಿ ಮಗ– ಸೊಸೆಯ ದರ್ಬಾರ್ ದರ್ಪದ ದೃಶ್ಯ ನೆನಪಾದಂತೆಲ್ಲ ಬಣ್ಣಿಸ್ತಾ, ಕಣ್ಣೊರೆಸಿಕೊಳ್ಳುತ್ತ, ಬಿಕ್ಕಳಿಸುತ್ತಾಳೆ, ಗಂಡನ ಅಸಹಾಯಕತೆ ನೆನಪಿಸುತ್ತ.